(ಇಂದು ದಿನಾಂಕಃ **27/10/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**<u>ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಕೆ.ಸಿ.ಪಿ. ವಕೀಲರಿಂದಃ-</u>**

9. ನನಗೆ ಈಗ 55 ವರ್ಷ ವಯಸ್ಸಾಗಿದೆ. ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ನಿಜ ಇರುತ್ತದೆ. ಎದುರುದಾರರ ಆದೇಶವನ್ನು ಈಗಾಗಲೇ ನಿಆರ್-25 ಎಂದು ಗುರುತಿಸಲಾಗಿದ್ದು, ಅದರ ಪ್ರತಿಯನ್ನು ನಿಪಿ-1 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಎದುರುದಾರರ ಪರ ಶ್ರೀ ಎಸ್.ಆರ್.ಪಿ. ವಕೀಲರಿಂದಃ-</u>**

10. ಹೊನ್ನತ್ತಿ ಮತ್ತು ದೇವರಗುಡ್ಡ ಮಧ್ಯೆದಲ್ಲಿ ಎದುರುದಾರರು ಬಸ್ಸನ್ನು ನಿಲ್ಲಿಸಿ ಪರಿಶೀಲಿಸಿದರು. ಪರಿಶೀಲನೆಗಾಗಿ ಒಬ್ಬ ಪುರುಷ ಮತ್ತು ಒಬ್ಬ ಮಹಿಳೆ ಅಧಿಕಾರಿ ಬಂದಿದ್ದರು. ನಾನು ಕೆಲವು ಪ್ರಯಾಣಿಕರಿಗೆ ಟಿಕೇಟ ನೀಡದೇ ಇದ್ದುದು ಕಂಡುಬಂತು ಎನ್ನುವುದು ಸುಳ್ಳು. ಆ ದಿನ ಬಸ್ಸಿನಲ್ಲಿ 55 ಜನ ಪ್ರಯಾಣಿಕರಿದ್ದರು ಎನ್ನುವುದು ನಿಜ. ಯಲ್ಲಾಪುರ ದಾಟಿದ ನಂತರ 4 ನೇ ಸ್ಟೇಜನ ಟಿಕೇಟುಗಳ ವಿತರಣೆ ಕುರಿತು ವೇ-ಬಿಲ್ ನಲ್ಲಿ ನಾನು ನಮೂದು ಮಾಡಿರಲಿಲ್ಲ ಎನ್ನುವುದು ಸುಳ್ಳು. ಅದರ ಅವಶ್ಯಕತೆ ಇರಲಿಲ್ಲ.

11. ಅಧಿಕಾರಿಗಳು ಬಂದು ಪರಿಶೀಲನೆ ಮಾಡುವ ಕಾಲಕ್ಕೆ ನಾನು ರೂ.22/-ರ ಟಿಕೇಟ್ ಹರಿಯಲು ಪ್ರಯತ್ನಿಸಿದೆ ಎನ್ನುವುದು ಸುಳ್ಳು. ಅಧಿಕಾರಿಗಳು ನೀಡಿದ ಜ್ಞಾಪನಾ ಪತ್ರವನ್ನು ನಾನು ಪಡೆಯಲಿಲ್ಲ ಅಂದರೆ ನಾನು ತಪ್ಪು ಮಾಡಿರಲಿಲ್ಲ. ಪರಿಶೀಲನೆಗೆ ನಾನು ಸಹಕರಿಸದೇ ಅಧಿಕಾರಿಗಳನ್ನು ಹೆದರಿಸಿದೆ ಎನ್ನುವುದು ಸುಳ್ಳು. ನಾನು ಬಸ್ಸಿನ ಮುಂದೆ ಮಲಗಿ ಪ್ರಯಾಣಿಕರಿಗೆ ಪ್ರಚೋದನೆ ನೀಡಿದೆ ಎನ್ನುವುದು ಸುಳ್ಳು. ಆ ದಿನ ರೂ.220/- ವಸೂಲಿ ಮಾಡಲಾಯಿತು ಎನ್ನುವುದು ಗೊತ್ತಿಲ್ಲ. ನಾನು ದಾಖಲೆಗೆ ಸಹಿ ಮಾಡಲು ನಿರಾಕರಿಸಿದೆ ಎನ್ನುವುದು ಸುಳ್ಳು. ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೆದರಿಸಿದೆ ಎನ್ನುವುದು ಸುಳ್ಳು.

12. ನನ್ನ ವಿರುದ್ಧ ಆರೋಪಣೆ ಹೊರಿಸಿ ವಿಚಾರಣೆ ನಡೆಸಲಾಯಿತು ಎನ್ನುವುದು ನಿಜ. ಆರೋಪಣೆಗಳಿಗೆ ನಾನು ವಿವರಣೆ ನೀಡಿದ್ದೇನೆ. ವಿಚಾರಣೆಗೆ ಹಾಜರಾದೆ.

13. ಈ ಮುಂಚೆ ನನ್ನ ವಿರುದ್ಧ 38 ಬಾರಿ ಆಪಾದನೆ ಮಾಡಿ ವಿಚಾರಣೆ ನಡೆಸಿ ದಂಡ ವಿಧಿಸಲಾಗಿದೆ ಎನ್ನುವುದು ನಿಜ. ಕೈಗಾರಿಕೆ ನ್ಯಾಯಮಂಡಳಿಗೆ ಎದುರುದಾರರು ತಮ್ಮ ಆದೇಶ ಕಳಿಸಿದ ನಂತರ, ನನಗೆ ನೋಟೀಸು ನೀಡಲಾಗಿತ್ತು ಎನ್ನುವುದು ನಿಜ. ನಾನು ಸಂಸ್ಥೆಯ ಹಣ ದುರುಪಯೋಗ ಮಾಡುತ್ತಾ ಬಂದಿದ್ದೇನೆ ಎನ್ನುವುದು ಸುಳ್ಳು. ಸರಿಯಾದ ಮತ್ತು ಸಂಪೂರ್ಣವಾದ ವಿಚಾರಣೆ ನಡೆಸಿ ವರದಿ ಸಲ್ಲಿಸಲಾಗಿದೆ ಎನ್ನುವುದು ಸುಳ್ಳು. ಯಾವುದೇ ನಿಯಮವನ್ನು ಉಲ್ಲಂಘಿಸಿಲ್ಲ ಎನ್ನುವುದು

ಸುಳ್ಳು. ನಾನು ಯಾವುದೇ ಪರಿಹಾರಕ್ಕೆ ಅರ್ಹನಲ್ಲ ಎನ್ನುವುದು ಸುಳ್ಳು. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**ಮರುವಿಚಾರಣೆಃ** ಇಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.